# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

**ಸ್ವಾಮಿ ಭಜನಾನಂದ**

(ಹಿಂದಿನ ಸಂಚಿಕೆಯಿಂದ)

**ಹಿಂದಿನ ಸಂಚಿಕೆಯಲ್ಲಿ**

ಧಾರ್ಮಿಕ ಸಂಘರ್ಷಗಳಿಗೆ ಧರ್ಮಗಳ ವೈವಿಧ್ಯತೆ ಅಥವಾ ಸೈದ್ಧಾಂತಿಕ ಭೇದಗಳು ಕಾರಣವಲ್ಲ. ಅವು ಈಗ ಉಂಟಾಗುತ್ತಿರುವುದಕ್ಕೆ ಕಾರಣ ಭಾರತೀಯ ಪರಂಪರೆಯ ವಿಧಾನವನ್ನು ಕೆಲವು ಶಕ್ತಿಗಳು ಬಿಟ್ಟು ನಡೆದಿರುವುದೇ ಆಗಿದೆ. ಅವುಗಳ ಬೆಳವಣಿಗೆಯನ್ನು ತಡೆಗಟ್ಟಲು, ವಿವಿಧ ಧರ್ಮಗಳ ವೈವಿಧ್ಯತೆಯನ್ನು ಮಾನ್ಯ ಮಾಡಬೇಕು. ಸಹಿಷ್ಣುತೆಗಿಂತ ಸಮನ್ವಯ ಹೆಚ್ಚು ವ್ಯಾಪಕ. ಅದು ಅಂತರಧರ್ಮೀಯವಾಗಿಯೂ ಅಂತಃಧರ್ಮೀಯವಾಗಿಯೂ ಸಾಧ್ಯ. ಅದರಲ್ಲಿ ರಾಜಕೀಯ, ಸಾಮಾಜಿಕ, ದೈವಶಾಸ್ತ್ರೀಯ, ಅನುಭಾವಿಕ ಮುಂತಾದ ಹಲವು ದೃಷ್ಟಿಕೋನಗಳಿವೆ. ಈ ನಾಲ್ಕೂ ದೃಷ್ಟಿಕೋನಗಳ ಕ್ರೋಡೀಕರಣವೇ ಆದರ್ಶ ದೃಷ್ಟಿಕೋನ. *( ಮುಂದೆ ಓದಿ )*

## ಸರ್ವಧರ್ಮ ಸಮನ್ವಯಾಚಾರ್ಯ ಶ್ರೀರಾಮಕೃಷ್ಣ

ಇತ್ತೀಚಿಗೆ ಧರ್ಮಸಮನ್ವಯದ ಬಗ್ಗೆ ಜನರಲ್ಲಿ ಆಸಕ್ತಿ ಬೆಳೆಯುತ್ತಿದೆ. ಅದಕ್ಕೆ ಜನಸಾಂದ್ರತೆಯ ನಿರ್ಬಂಧವಿರಬಹುದು ಅಥವಾ ಇನ್ನಾವುದೇ ಕಾರಣಗಳಿರಬಹುದು. ಆದರೆ, ಈ ಆಸಕ್ತಿಗೆ ಶ್ರೀರಾಮಕೃಷ್ಣರ ಪರೋಕ್ಷ, ಅಪರೋಕ್ಷ ಅಥವಾ ಅತಿದೂರದ ಪ್ರಭಾವವಿರುವುದನ್ನು ಅಲ್ಲಗೆಳೆಯಲಾಗದು. ಆಧುನಿಕ ಕಾಲದಲ್ಲಿ ಸರ್ವಧರ್ಮ ಸಮನ್ವಯವನ್ನು ಮುಕ್ತವಾಗಿ ಬೋಧಿಸಿದವರಲ್ಲಿ ಶ್ರೀರಾಮಕೃಷ್ಣರೇ ಮೊದಲಿಗರು.

ಶ್ರೀರಾಮಕೃಷ್ಣರು ಜನ್ಮತಳೆದ ಮತ್ತು ಬೆಳೆದುಬಂದ ಸಮಾಜದ ಸಾಂಪ್ರದಾಯಿಕ ಪರಿಸ್ಥಿತಿ ಮತ್ತು ಕುಟುಂಬದ ಮಡಿವಂತಿಕೆ ಈ ಬಗೆಯ ಉದಾರ ದೃಷ್ಟಿಯ ಬೆಳವಣಿಗೆಗೆ ಅತ್ಯಂತ ಅನಾನುಕೂಲಕರವೇ ಆಗಿದ್ದವು. ಅಂದಿನ ದಿನಗಳಲ್ಲಿ ಮಡಿವಂತ ಬ್ರಾಹ್ಮಣರು ಕೆಳವರ್ಗದ ಹಿಂದುಗಳಿಂದ ಆಹಾರವನ್ನು ಸ್ವೀಕರಿಸುತ್ತಿರಲಿಲ್ಲ, ನೀರನ್ನೂ ಕುಡಿಯುತ್ತಿರಲಿಲ್ಲ. ಇತರ ಧರ್ಮಗಳಿಗೆ ಸೇರಿದವರನ್ನಂತೂ "ಮ್ಲೇಚ್ಛ" ಎಂಬ ಹಣೆಪಟ್ಟಿಯನ್ನಿಟ್ಟು ಕರೆಯಲಾಗುತ್ತಿತ್ತು [ಈ ಪದವು ಕ್ರೈಸ್ತರು ಉಪಯೋಗಿಸುವ 'ಹೀದನ್' (Heathen) ಮತ್ತು ಮುಸ್ಲಿಮರು ಉಪಯೋಗಿಸುವ 'ಕಾಫಿರ್' ಪದಕ್ಕೆ ಸಮನಾಗಿದೆ. ಈ ಎರಡೂ ಪದಗಳ ಅರ್ಥ 'ವಿಧರ್ಮೀಯ' ಎಂದು). ಶ್ರೀರಾಮಕೃಷ್ಣರು ತಮ್ಮ ಬಾಲ್ಯದ ದಿನಗಳನ್ನು ಕಳೆದ ಪರಿಸ್ಥಿತಿಯನ್ನು ಅಧ್ಯಯನ ಮಾಡಿದಾಗ, ಯಾವುದೇ ಬಾಹ್ಯ ಆಕರಗಳಿಂದಲೂ ಅವರು ಧರ್ಮಸಮನ್ವಯದ ಭಾವನೆಯನ್ನು ಎರವಲು ಪಡೆದುಕೊಳ್ಳಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ, ಅವರು ಧರ್ಮಸಮನ್ವಯದ ಭಾವನೆಯನ್ನು ಬೋಧಿಸಿದ್ದು, ಯಾವುದೇ ಮಾನ್ಯತೆಯನ್ನಾಗಲೀ, ಹೆಸರು-ಕೀರ್ತಿಗಳನ್ನಾಗಲಿ, ಪಡೆಯುವ ಉದ್ದೇಶದಿಂದಲ್ಲ. ಹಾಗಾದರೆ, ಈ ಭಾವನೆಯನ್ನು ಅವರು ಬೋಧಿಸುವಂತೆ ಪ್ರೇರೇಪಿಸಿದ ಅಂಶ ಯಾವುದು? ಇದಕ್ಕೆ ಉತ್ತರವನ್ನು ಅವರ ಆಧ್ಯಾತ್ಮಿಕ ಸಂಗಾತಿಯಾದ ಶ್ರೀಶಾರದಾದೇವಿಯವರು ಹೀಗೆ ನೀಡುವರು: "ಧರ್ಮಸಮನ್ವಯದ ಭಾವನೆಯನ್ನು ಸಂಸ್ಥಾಪಿಸಲೆಂದೇ ಗುರು-ದೇವರು ವಿವಿಧ ಧರ್ಮಮಾರ್ಗಗಳನ್ನು ಅನುಸರಿಸಿದರೆಂಬ ತಥ್ಯ ನನಗೆ ಯಾವತ್ತೂ ಹೊಳೆದೇ ಇರಲಿಲ್ಲ. ಅವರೊಬ್ಬ ಭಗವತ್ಪ್ರೇಮಿ, ಭಗವದಾನಂದವನ್ನು ವಿವಿಧ ಬಗೆಗಳಲ್ಲಿ ಸವಿಯಲು ಇಚ್ಛಿಸಿದ್ದರು. ಇದೇ ಅವರು ವಿವಿಧ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸಲು ಉತ್ತೇಜಿಸಿತು."[೧] ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಧರ್ಮಸಮನ್ವಯದ ಭಾವನೆ, ಶ್ರೀರಾಮಕೃಷ್ಣರಲ್ಲಿ ಉಗಮವಾಗಿದ್ದು ನೇರ ಅನುಭಾವಿಕ ಅನುಭವದ ರೂಪದಲ್ಲಿ; ಅವರಿಗೆ ಅದು ವೇದ್ಯವಾಗಿದ್ದು ಅಂತರಂಗದ ಅನ್ವೇಷಣೆ ಮತ್ತು ವೈಯಕ್ತಿಕ ಪ್ರಕಾಶನದ ರೂಪದಲ್ಲಿ.

ಬಡವರಾಗಿದ್ದರೂ ಧಾರ್ಮಿಕರೂ ಶ್ರದ್ಧಾಳುಗಳೂ ಆದ ಬ್ರಾಹ್ಮಣರ ಕುಟುಂಬದಲ್ಲಿ, ಪಶ್ಚಿಮ ಬಂಗಾಳದ ಕಾಡುಮೂಲೆಯಲ್ಲಿರುವ ಗ್ರಾಮದಲ್ಲಿ ಜನಿಸಿದ ಶ್ರೀರಾಮಕೃಷ್ಣರು (೧೮೩೬-೧೮೮೬) ಬಾಲ್ಯದಲ್ಲಿಯೇ ಅನುಭಾವಿಕ ಮನಃಸ್ವಭಾವದ (mystical temperament) ಚಿಹ್ನೆಗಳನ್ನು ಪ್ರಕಟಪಡಿಸಿದರು. ಓದಲು ಮತ್ತು ಬರೆಯಲು ಸಮರ್ಥರಾಗುವಷ್ಟು ಮಾತ್ರ ಶಾಲಾವ್ಯಾಸಂಗವನ್ನು ಪಡೆದಿದ್ದರು. ಹತ್ತೊಂಬತ್ತನೆಯ ವಯಸ್ಸಿಗೆ, ಆಗ ತಾನೇ ನೂತನವಾಗಿ ಪ್ರತಿಷ್ಠಾಪನೆಗೊಂಡಿದ್ದ, ದಕ್ಷಿಣೇಶ್ವರದ ಕಾಳೀ ದೇಗುಲದ ಪೂಜಾರಿಯಾದರು. ಸಾಧಾರಣ ಪೂಜಾರಿಗಳ ವಿಷಯದಲ್ಲಿ ಏನು ನಡೆಯುವುದೋ ಅದಕ್ಕಿಂತ ಭಿನ್ನವಾಗಿ, ಆ ದೇವಿಯ ಸೇವೆಯು ರಾಮಕೃಷ್ಣರಲ್ಲಿ ಭಗವದ್ವ್ಯಾಕುಲತೆಯನ್ನು ಪ್ರದೀಪ್ತಗೊಳಿಸಿತು. ಅವರು ಇಡೀ ರಾತ್ರಿಗಳನ್ನು ದಕ್ಷಿಣೇಶ್ವರದ ನಿರ್ಜನ ಪ್ರದೇಶವೊಂದರಲ್ಲಿ ಭಗವತ್ತನ್ಮಯತೆಯಿಂದ ಕಳೆಯಲಾರಂಭಿಸಿದರು. ಅದರಲ್ಲಿ ಅವರು ಅನುಸರಿಸಿದ ವಿಧಾನವೆಂದರೆ, ತೀವ್ರ ವ್ಯಾಕುಲತೆ ಮತ್ತು ಪ್ರಾರ್ಥನೆ. ಒಂದು ವರ್ಷದ ಕಡೆಯಲ್ಲಿ ಅವರು ಜಗನ್ಮಾತೆಯ ಅಪೂರ್ವ ದರ್ಶನವನ್ನು ಹೊಂದಿದರು; ದೇವಿ ಅವರಿಗೆ ಬೆಳಕಿನ ಸೀಮಾತೀತ ಸಾಗರದಂತೆ ತೋರಿದಳು.

ದೈವಸಾಕ್ಷಾತ್ಕಾರ ಪಡೆದ ಮಹಾತ್ಮರು ಸಾಧಾರಣವಾಗಿ ಒಂದು ಮಾರ್ಗವನ್ನು ಅನುಸರಿಸುವುದರಲ್ಲಿಯೇ ತೃಪ್ತಿಹೊಂದುವರು. ಆದರೆ ಶ್ರೀರಾಮಕೃಷ್ಣರಿಗೆ, ಭಗವಂತನನ್ನು ಹಲವು ಮಾರ್ಗಗಳಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಅತೀವ ಆಕಾಂಕ್ಷೆ ಮೂಡಿತು. ಮೊದಮೊದಲು ಅವರು ಯೋಗ, ತಂತ್ರ, ವೈಷ್ಣವ ಮತ್ತಿತರ ಹಿಂದೂಧರ್ಮದ ವಿವಿಧ ಪಥಗಳನ್ನು ಅನುಸರಿಸಿದರು ಮತ್ತು ಅವುಗಳಲ್ಲಿ ಪ್ರತಿಯೊಂದರಲ್ಲೂ, ಅತಿ ಶೀಘ್ರಾವಧಿಯಲ್ಲಿಯೆ




ಗುರಿಯನ್ನು ತಲುಪಿದರು. ಈ ಆಧ್ಯಾತ್ಮಿಕ ಪಯಣ ಸುಸಂಪನ್ನಗೊಂಡಿದ್ದು, ಅವರ ೨೮ನೆಯ ವಯಸ್ಸಿನಲ್ಲಿ, ಅವರು ನಿರ್ವಿಕಲ್ಪ ಸಮಾಧಿಯ ಮೂಲಕ ಪಡೆದ ಅದ್ವೈತಾನುಭೂತಿಯಲ್ಲಿ.

ಭಗವಂತನನ್ನು ಇತರ ಧರ್ಮಗಳ ಮೂಲಕವೂ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಬಯಕೆ ಈಗ ಅವರಲ್ಲಿ ಪ್ರಬಲವಾಯಿತು. ಎರಡು ವರ್ಷಗಳ ನಂತರ, ಅಂದರೆ ೧೮೬೬ರಲ್ಲಿ, ಸೂಫಿ ಮಾರ್ಗದರ್ಶಕನೊಬ್ಬನ ಅಡಿಯಲ್ಲಿ ಅವರು ಇಸ್ಲಾಂ ಧರ್ಮದ ಸೂಫಿ ಪಥವನ್ನು ಅನುಸರಿಸಲಾರಂಭಿಸಿದರು. ಆಗ ಅವರು ಒಬ್ಬ ಮುಸ್ಲಿಮನಂತೆ ಇರುತ್ತಿದ್ದರು; 'ನಮಾಜ್' ಮಾಡುತ್ತಿದ್ದರು ಮತ್ತು 'ಅಲ್ಲಾಹು'ವಿನ ನಾಮವನ್ನು ಪುನರುಚ್ಚರಿಸುತ್ತಿದ್ದರು. ಈ ಸಾಧನಾ ವಿಧಾನವು ಪರತತ್ತ್ವದಲ್ಲಿ ಅಂತಿಮವಾಗಿ ವಿಲೀನನಾದ ಜ್ಯೋತಿರ್ಮಯ ಪುರುಷನೊಬ್ಬನ ದರ್ಶನದಲ್ಲಿ ಕೊನೆಗೊಂಡಿತು.

ಎಂಟು ವರ್ಷಗಳ ನಂತರ, ಕ್ರೈಸ್ತಧರ್ಮದ ಆಧ್ಯಾತ್ಮಿಕ ಪಥದಲ್ಲಿ ಭಗವತ್ಸಾಕ್ಷಾತ್ಕಾರವನ್ನು ಪಡೆಯುವ ಆಶಯ ಅವರಲ್ಲಿ ತೀವ್ರವಾಯಿತು. ಆಗ ಅವರು ಬೈಬಲ್ಲಿನ ಪಠಣವನ್ನು ಆಲಿಸಲು ಆರಂಭಿಸಿದರು. ೧೮೭೪ ರಲ್ಲಿ ಒಂದು ದಿನ ಮಡೋನಾ ಜೊತೆಯಿರುವ ಬಾಲ ಏಸುವಿನ ಚಿತ್ರವನ್ನು ದಿಟ್ಟಿಸಿ ನೋಡುತ್ತಿದ್ದಾಗ, ಶ್ರೀರಾಮಕೃಷ್ಣರು ಕ್ರೈಸ್ತಭಾವದಲ್ಲಿ ತಲ್ಲೀನರಾಗಿಹೋದರು. ಈ ಅಂತರಂಗದ ತಲ್ಲೀನತೆ ಎಷ್ಟು ಉತ್ಕಟವಾಗಿತ್ತೆಂದರೆ, ಮೂರು ದಿನಗಳ ಕಾಲ, ಹಿಂದೂ ದೇವಾಲಯಗಳ ಕಡೆ ಹೋಗಲಾಗಲಿ, ಹಿಂದೂ ದೇವತೆಗಳನ್ನು ಚಿಂತಿಸಲಾಗಲಿ ಅವರಿಗೆ ಸಾಧ್ಯವಾಗಲಿಲ್ಲ. ಈ ಅವಧಿಯ ಅಂತ್ಯದಲ್ಲಿ ಅವರು ಏಸುಕ್ರಿಸ್ತನ ಪರಮಾದ್ಭುತ ದರ್ಶನವನ್ನು ಪಡೆದರು. ಆ ದಿವ್ಯಮೂರ್ತಿಯೂ ಕಡೆಗೆ ಪರತತ್ತ್ವಾನುಭೂತಿಯಲ್ಲಿ ಲೀನವಾಯಿತು.

ಇಲ್ಲೊಂದು ಪ್ರಶ್ನೆ ಉದ್ಭವಿಸುವುದು. ಶ್ರೀರಾಮಕೃಷ್ಣರು ಇಷ್ಟೊಂದು ಅಲ್ಪಾವಧಿಯಲ್ಲಿ, 'ಇಸ್ಲಾಂ' ಮತ್ತು 'ಕ್ರೈಸ್ತ' ಮಾರ್ಗಗಳ ಮೂಲಕ ಭಗವತ್‌ಸಾಕ್ಷಾತ್ಕಾರವನ್ನು ಪಡೆಯಲು ಹೇಗೆ ತಾನೆ ಸಾಧ್ಯವಾಯಿತು? ಮಹಾನ್ ಅನುಭಾವಿಗಳ ಜೀವನ ಮತ್ತು ಕಾರ್ಯಗಳ ಬಗ್ಗೆ ಅರಿತವರೆಲ್ಲರಿಗೂ ಇದು ಸ್ವಯಂವೇದ್ಯ. ಶ್ರೀರಾಮಕೃಷ್ಣರು, ಹಲವು ವರ್ಷಗಳ ಉತ್ಕಟ ಆಧ್ಯಾತ್ಮಿಕ ಸಾಧನೆಗಳ ಫಲವಾಗಿ, ಈ ಬಗೆಯ ಸಂಪೂರ್ಣ ಮಾನಸಿಕ ಪರಿಶುದ್ಧತೆಯನ್ನು, ತನ್ಮಯತೆಯಲ್ಲಿ ಪರಿಪೂರ್ಣತೆಯನ್ನು ಗಳಿಸಿಕೊಂಡಿದ್ದರು. ಹೀಗಾಗಿ, ಆಧ್ಯಾತ್ಮಿಕ ಪ್ರಗತಿಯ ವಿವಿಧ ಹಂತಗಳನ್ನು ಸಾಧಾರಣ ಅನುಭಾವಿಗಳಂತೆ ಮತ್ತೆ ಹಾದು ಹೋಗುವ ಪ್ರಮೇಯ ಅವರಿಗಿರಲಿಲ್ಲ. ಆ ಹಂತಗಳು ಯಾವುವೆಂದರೆ, ಶುದ್ಧೀಕರಣ ಅಥವಾ ಅಪರಾಧ ಪರಿಹಾರ (Purgation). ಜ್ಞಾನೋದಯ (illumination), ಸಂಯೋಗ (Union).

ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭವಗಳನ್ನು ಕುರಿತು ಎರಡು ಅಂಶಗಳನ್ನು ಗಮನಿಸಬೇಕು. ಒಂದು ಶ್ರೀರಾಮಕೃಷ್ಣರು ಪ್ರತಿಯೊಂದು ಧರ್ಮವನ್ನೂ ಅದರ ಅನುಯಾಯಿಗಳು ಕಾಣುವ ದೃಷ್ಟಿಯಲ್ಲೇ ಕಂಡರು ಎಂಬುದು. ಒಂದು ಧರ್ಮಮಾರ್ಗವನ್ನು ಅನುಸರಿಸುವಾಗ, ಅದರ ಪದ್ಧತಿಗಳಿಗೆ ತಮ್ಮನ್ನು ಸಂಪೂರ್ಣವಾಗಿ ಅವರು ಒಗ್ಗಿಸಿಕೊಳ್ಳುತ್ತಿದ್ದರು. ಎರಡನೆಯ ಅಂಶವೆಂದರೆ, ಯಾವ ಧರ್ಮಪಥವನ್ನು ಅನುಸರಿಸಿದರೂ ಅವೆಲ್ಲವೂ ನಿರ್ಗುಣ ತತ್ತ್ವದ ಅನುಭಾವದಲ್ಲಿ ಪರ್ಯವಸಾನವಾಗುತ್ತಿತ್ತು ಎನ್ನುವುದು. ಈ ಬಗೆಯ ಅಪರೋಕ್ಷಾನುಭೂತಿಯಿಂದಲೇ ಅವರು ಧರ್ಮಸಮನ್ವಯ ಸ್ವಭಾವವನ್ನು ಪಡೆದುಕೊಂಡರು; ಅದನ್ನು '*ಯತೋ ಮತ್ ತತೋ ಪಥ್* '– ಮತಗಳೆಷ್ಟೋ, ಅಷ್ಟು ಪಥಗಳು ಎಂದು ವಿವರಿಸಿದರು.

ಬೇರೆಲ್ಲ ಮಹಾತ್ಮರಂತೆ, ಶ್ರೀರಾಮಕೃಷ್ಣರೂ ಪ್ರಮಾಣಬದ್ಧ ಬಾಳುವೆಯನ್ನು ಬಾಳಿದರು. ಅವರ ಆಲೋಚನೆ, ಮಾತುಕತೆ ಮತ್ತು ಕ್ರಿಯೆಗಳಲ್ಲಿ ಯಾವ ವೈಪರೀತ್ಯಗಳೂ ಇರಲಿಲ್ಲ. 'ಧರ್ಮಸಮನ್ವಯ' ದ ಬಗ್ಗೆ ಒಮ್ಮೆ ಖಚಿತಪಡಿಸಿಕೊಂಡ ಮೇಲೆ ಅದು ಈ ಕಾಲದ ಅವಶ್ಯಕತೆಯೆಂದರಿತು, ಮಿಕ್ಕವರೊಡನೆ ಅದರ ಬಗ್ಗೆ ಮಾತನಾಡತೊಡಗಿದರು.

ಶ್ರೀರಾಮಕೃಷ್ಣರು ಕೇವಲ ಧರ್ಮಸಮನ್ವಯವನ್ನು ಮಾತ್ರ ಉಪದೇಶಿಸಲಿಲ್ಲ. ತಾವು ಬೋಧಿಸಿದ್ದನ್ನು ಬದುಕಿಯೂ ತೋರಿಸಿದರು. ದಕ್ಷಿಣೇಶ್ವರದಲ್ಲಿ ಅವರಿದ್ದ ಸಣ್ಣ ಕೊಠಡಿ ಹಲವು ದಿಕ್ಕುಗಳಿಂದ ಬಂದು ಒಗ್ಗೂಡಿದ, ವಿವಿಧ ಧರ್ಮಗಳಿಗೆ ಸೇರಿದ ಜನರ ಮಿಲನದ ತಾಣವಾಗಿತ್ತು. ಶ್ರೀರಾಮಕೃಷ್ಣರು ವಿವಿಧ ಧರ್ಮಗಳಿಗೆ ಸೇರಿದ ಜನರನ್ನು ಕೇವಲ ಸ್ವಾಗತಿಸುತ್ತಿರಲಿಲ್ಲ, ಅವರ ಭಾವನೆಗಳೊಂದಿಗೆ ತಾದಾತ್ಮ್ಯವನ್ನು ಹೊಂದಿ, ಅವರೊಡನೆ ಒಂದಾಗಿಬಿಡುತ್ತಿದ್ದರು. ಶ್ರೀರಾಮಕೃಷ್ಣರ ಜೀವನದ ಈ ಅಂಶವನ್ನು ಕುರಿತು,

### ಕ್ರೈಸ್ತಧರ್ಮದಲ್ಲಿ ಅಂತರ್ಗತ ಮನೋಭಾವ (Inclusivism)

ಕ್ರೈಸ್ತನ ಬೋಧನೆಗಳನ್ನು ಅಥವಾ ಅವನ ಚರ್ಚ್ ಬಗ್ಗೆ ತಿಳಿಯದವರೂ ಕೂಡ, ಭಕ್ತಿಯಿಂದ ಭಗವಂತನನ್ನು ಯಾಚಿಸಿದರೆ, ಅವನ ಕೃಪೆಗಾಗಿ ಹಾತೊರೆದರೆ, ಅವರ ಅಂತಃಸಾಕ್ಷಿಯ ನಿರ್ದೇಶನಗಳಿಗೆ ಅನುಸಾರವಾಗಿ ಭಗವದಿಚ್ಛೆಯಂತೆ ನಡೆದು ಪ್ರಯತ್ನಿಸಿದರೆ, ನಿತ್ಯ ಸ್ವರ್ಗಸಾಮ್ರಾಜ್ಯವನ್ನು ಪಡೆದುಕೊಳ್ಳಬಹುದು.

– Second Vatican Council, Dogmatic Constitution on the Church: Lumen Gentium, 16

ಭಗವಂತನು ಯಾರಿಗೆ ಬೇಕಾದರೂ ಯಾವಾಗ ಬೇಕಾದರೂ ಸಾಕ್ಷಾತ್ಕಾರ ಕೊಡಬಹುದು. ಅದಕ್ಕಾಗಿ ಬಾಹ್ಯ ಬೋಧನೆಯ ಆವಶ್ಯಕತೆ ಇಲ್ಲ. ಬೋಧನೆ ಎನ್ನುವುದು ಭಗವಂತನ ಶಕ್ತಿಯ ಅಂಗವಷ್ಟೇ ಆಗಿರಬೇಕು. – Second Helvetic Confession, Chapter 1 (1566)

ಒಬ್ಬ ವ್ಯಕ್ತಿ ಕ್ರೈಸ್ತನ ಮೂಲಕ ಮಾತ್ರವೇ ರಕ್ಷಣೆ ಹೊಂದುತ್ತಾನೆ ಎನ್ನುವುದನ್ನು ನಾವು ಅರಿಯೆವು; ಅಷ್ಟು ಮಾತ್ರವಲ್ಲ, ಅವನ ಬಗ್ಗೆ ತಿಳಿದಿರುವವರು ಮಾತ್ರವೇ ಅವನಿಂದ ರಕ್ಷಿಸಲ್ಪಡುತ್ತಾರೆ ಎನ್ನುವುದನ್ನೂ ತಿಳಿಯೆವು.

– ಸಿ.ಎಸ್. ಲೂಯಿಸ್, Mere Christianity (New York: Touchstone, 1996), p. 65.

ನಾನು, ಉಪದೇಶಕರು ಹೇಳುವಂತೆ, ಕ್ರೈಸ್ತನನ್ನು ನಂಬದ ಲಕ್ಷಾಂತರ ಜನರು ನಾಶಹೊಂದುವರೆಂದು ನಂಬುವುದಿಲ್ಲ. ಹಾಗೆಂದು ನಾನು ಉದಾರವಾದಿಯೂ ಅಲ್ಲ. ಈ ಎರಡು ತೀವ್ರ ವಾದಗಳ ನಡುವೆ, ಮಾನವ ಜನಾಂಗದ ಬಹುತೇಕ ಮಂದಿ ರಕ್ಷಿಸಲ್ಪಡುವರೆಂದು ನಾನು ನಂಬುತ್ತೇನೆ. ಅದಕ್ಕೆ ಬೈಬಲ್ಲಿನಲ್ಲಿಯೇ ನಿದರ್ಶನಗಳನ್ನು ತೋರಿಸಬಲ್ಲೆ. – ಜಾನ್ ಸ್ಟಾಟ್

ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: " ಜಗತ್ತಿನ ಇತರ ಕಡೆಗಳಲ್ಲಿ ವಿಶ್ವಧರ್ಮ, ಭಿನ್ನ ಭಿನ್ನ ಧರ್ಮಗಳಿಗೆ ಸಹಾನುಭೂತಿ ಎಂಬ ಭಾವನೆಗಳನ್ನು ಆಲೋಚಿಸುವುದಕ್ಕಿಂತ ಮುಂಚೆಯೇ, ಇಲ್ಲೇ, ನಮ್ಮ ನಗರದಲ್ಲಿಯೇ (ಕೊಲ್ಕತಾ) ಅಂತಹ ಮಹಾ ಪುರುಷರೊಬ್ಬರು ವಾಸಿಸುತ್ತಿದ್ದರು."[2]

## ನಾಲ್ಕು ಅಂತರಧರ್ಮೀಯ ಮನೋಭಾವಗಳು

ವಿವಿಧ ಧರ್ಮಗಳಿಗೆ ಸೇರಿದ ಅನುಯಾಯಿಗಳ ನಡುವಣ ಘರ್ಷಣೆಗಳು ಉಂಟಾಗುವುದು ತಮ್ಮದಲ್ಲದ ಮತಗಳ ಬಗ್ಗೆ ತಪ್ಪು ಮನೋಭಾವವನ್ನು ಅವರು ಹೊಂದಿರುವುದರಿಂದಲೇ. ಒಬ್ಬ ವ್ಯಕ್ತಿಯು ಇತರ ಧರ್ಮಗಳ ಬಗ್ಗೆ ಹೊಂದಿರುವ ಮನೋಭಾವವು ಹಲವಾರು ಸಂಗತಿಗಳ ಮೇಲೆ ಆಧಾರಿತ ವಾಗಿರುತ್ತದೆ. ಪಾಶ್ಚಾತ್ಯ ವಿದ್ವಾಂಸರು ಮುಖ್ಯವಾಗಿ ಈ ಮೂರು ಮನೋಭಾವಗಳನ್ನು ಗುರುತಿಸುತ್ತಾರೆ. ೧. ಪ್ರತ್ಯೇಕತಾ ಮನೋಭಾವ (Exclusivism), ೨. ಅಂತರ್ಗತ ಮನೋಭಾವ (Inclusivism) ೩. ಬಹುತ್ವ ಅಥವಾ ಅನೇಕತ್ವ ಮನೋಭಾವ (Pluralism).[3]

### ೧. ಪ್ರತ್ಯೇಕತಾ ಮನೋಭಾವ (Exclusivism)

ಪ್ರತ್ಯೇಕತಾ ಮನೋಭಾವವೆಂದರೆ, "ನನ್ನ ಧರ್ಮವೊಂದೇ ಸತ್ಯ ಮತ್ತು ಮಿಕ್ಕೆಲ್ಲ ಧರ್ಮಗಳೂ ಅಸತ್ಯ" ಎಂಬ ಅಭಿಪ್ರಾಯ. ಈ ಮನೋಭಾವದ ಪ್ರಕಾರ ಸತ್ಯದ ಪ್ರಕಾಶನವು ಒಂದೇ ಆಗಿರಲು ಸಾಧ್ಯ ಮತ್ತು ಮೋಕ್ಷಕ್ಕೆ ಇರುವುದು ಒಂದೇ ದಾರಿ.

೧೮೯೩ ನೆಯ ಇಸವಿಯಲ್ಲಿ ಅಮೆರಿಕೆಯ ಷಿಕಾಗೋ ನಗರದಲ್ಲಿ ವಿಶ್ವಧರ್ಮ ಸಮ್ಮೇಳನವು ಜರುಗುವುದಕ್ಕಿಂತ ಮುಂಚೆ ಪ್ರಚಲಿತವಾಗಿದ್ದ ಅಭಿಪ್ರಾಯ ಇದೇ ಆಗಿತ್ತು. ಈಗಲೂ ಕೆಲವು ಧರ್ಮಗಳು ಮತ್ತು ಕೆಲವು ಧರ್ಮಗಳ ಒಳಪಂಗಡಗಳು ಈ ಅಭಿಪ್ರಾಯವನ್ನೇ ಹೊಂದಿವೆ. ಕ್ರೈಸ್ತಧರ್ಮದಲ್ಲಿ ಈ ಅಭಿಪ್ರಾಯವು 'ಚರ್ಚಿನ ಹೊರಗಡೆ ಮುಕ್ತಿಯು ಇಲ್ಲ' ಎಂಬ ನಂಬಿಕೆಯಲ್ಲಿ ವ್ಯಕ್ತಗೊಂಡಿತು. ಕಳೆದ ಶತಮಾನದ ಮೊದಲ ದಶಕಗಳಲ್ಲಿ ಈ ಬಗೆಯ ಪ್ರತ್ಯೇಕತಾ ಮನೋಭಾವವನ್ನು ಪ್ರಬಲವಾಗಿ ಸಮರ್ಥಿಸಿದವರೆಂದರೆ ಕಾರ್ಲ್ ಬರ್ತ್, ಎಮಿಲಿ ಬ್ರುನ್ನರ್ ಮತ್ತು ಹೆಂಡ್ರಿಕ್ ಕ್ರೈಮರ್. ಆದರೆ ಕ್ಯಾಥೊಲಿಕ್ ಚರ್ಚಿನ ಎರಡನೆಯ ವ್ಯಾಟಿಕನ್ ಸಮಾವೇಶ ಮತ್ತು ವಿಶ್ವ ಚರ್ಚುಗಳ ಸಂಘಟನೆಯ ರಚನೆಯ ನಂತರ ಈ ಅಭಿಪ್ರಾಯವು ಕ್ರೈಸ್ತಧರ್ಮದಲ್ಲಿ ಚಾಲ್ತಿಯಲ್ಲಿಲ್ಲ ಎಂದೇ ಹೇಳಬಹುದು. ಅದರಂತೆಯೇ, ಎಲ್ಲ ಧರ್ಮಗಳಿಗೆ ಸೇರಿದ, ಉದಾರ ಮನೋಭಾವದ ಜನರೆಲ್ಲರೂ ಈ ಬಗೆಯ ಸಂಕುಚಿತ ಅಭಿಪ್ರಾಯವನ್ನು ತ್ಯಜಿಸಿದ್ದಾರೆ ಎನ್ನಬಹುದು.

ಪ್ರತ್ಯೇಕತಾ ಮನೋಭಾವವು ಉಗ್ರ ಸಾಮಾಜಿಕ ಅಭಿವ್ಯಕ್ತಿಯನ್ನು ಕಂಡುಕೊಂಡಾಗ ಅದು 'ಮೂಲಭೂತವಾದ' ವಾಗುತ್ತದೆ. (fundamentalism). ವಿವಿಧ ಧರ್ಮಗಳಲ್ಲಿ ಈ ಮೂಲಭೂತ ವಾದವು ಉಲ್ಬಣಗೊಳ್ಳುತ್ತಿದ್ದು, ಕೆಲವು ಮೂಲಭೂತವಾದೀ ಗುಂಪುಗಳ 'ತೀವ್ರವಾದ' ದ ಮತ್ತು 'ಉಗ್ರವಾದ' ದ ವಿಧಾನಗಳು ವರ್ತಮಾನ ಕಾಲದ ಜಾಗತಿಕ ಶಾಂತಿ, ಸ್ನೇಹಭಾವ ಮತ್ತು ಸಮೃದ್ಧಿಗಳಿಗೆ ಪ್ರಧಾನ ಅಡ್ಡಿಯಾಗಿ ಪರಿಣಮಿಸಿವೆ.

### ೨. ಅಂತರ್ಗತ ಮನೋಭಾವ (Inclusivism)

ಅಂತರ್ಗತ ಮನೋಭಾವವೆಂದರೆ, "ನನ್ನ ಧರ್ಮವೊಂದೇ ಸತ್ಯ. ಆದರೆ, ಇತರ ಧರ್ಮಗಳು ಅಸತ್ಯವೇನಲ್ಲ, ಏಕೆಂದರೆ ಅವೆಲ್ಲವೂ ನನ್ನ ಧರ್ಮದಲ್ಲಿಯೇ ಅಂತರ್ಗತವಾಗಿದೆ" ಎಂಬ ಧೋರಣೆ. ತನ್ನ ಸ್ವಂತ ಧರ್ಮದ ಸತ್ಯಪ್ರಕಾಶನವು ಸಂಪೂರ್ಣ, ಪರಿಪೂರ್ಣ ಮತ್ತು ಅಂತಿಮ. ಇತರ ಧರ್ಮಗಳಲ್ಲಿ ಅದು ಅಸಂಪೂರ್ಣ, ಅಪರಿಪೂರ್ಣ ಮತ್ತು ಆನುಷಂಗಿಕ. ಇತರ ಧರ್ಮಗಳು ತನ್ನ ಧರ್ಮವನ್ನು ಅರಿತುಕೊಳ್ಳಲು ಮತ್ತು ಒಪ್ಪಿಕೊಳ್ಳಲು ಇರುವ ತಯಾರಿಗಳು ಮಾತ್ರ – ಇದು ಈ ಮನೋಭಾವವುಳ್ಳವರ ನಿಲುವು.

ಎಲ್ಲಾ ವಿಶ್ವಧರ್ಮಗಳಲ್ಲಿ ಈ ಬಗೆಯ ಅಂತರ್ಗತ ಮನೋಭಾವವನ್ನು ಒಂದಲ್ಲ ಒಂದು ರೂಪದಲ್ಲಿ ಕಾಣಬಹುದು. ಹಿಂದೂಧರ್ಮದಲ್ಲಿ, ಭಗವದ್ಗೀತೆಯಲ್ಲಿ ಬರುವ ಶ್ರೀಕೃಷ್ಣನ ನುಡಿಯನ್ನು ಈ ಬಗೆಯ ಅಂತರ್ಗತ ಮನೋಭಾವಕ್ಕೆ ಉದಾಹರಣೆಯಾಗಿ ಉಲ್ಲೇಖಿಸಬಹುದು. '*ಒಬ್ಬ ವ್ಯಕ್ತಿಯು ಯಾವ ಮಾರ್ಗದಲ್ಲಿ ನನ್ನನ್ನು ಪಡೆಯಲು ಇಚ್ಛಿಸುತ್ತಾನೋ ನಾನು ಆ ಮಾರ್ಗದಲ್ಲಿಯೇ ಅವನಿಗೆ ಅನುಗ್ರಹಿಸುತ್ತೇನೆ. ಎಲ್ಲಾ ಕಡೆಯೂ ಜನ ಅನುಸರಿಸುವುದು ನನ್ನನ್ನು ಸೇರುವ ಮಾರ್ಗವನ್ನೇ.*'[೧] ಕ್ರಿ.ಶ. ನಾಲ್ಕನೆಯ ಶತಮಾನದಷ್ಟು ಪೂರ್ವದಲ್ಲಿಯೆ, ಸೈಂಟ್ ಅಗಸ್ಟೈನ್ ನುಡಿದ ಈ ಮಾತುಗಳಲ್ಲಿ, ಮುಂದಿನ ದಿನಗಳಲ್ಲಿ ಕ್ರೈಸ್ತಧರ್ಮದಲ್ಲಿ ಅಂತರ್ಗತ ಮನೋಭಾವವು ಕಾಣಬರುವುದು ಎಂಬ ನಿರೀಕ್ಷೆಯನ್ನು ಕಾಣುತ್ತೇವೆ: "ವಾಸ್ತವ ಸ್ಥಿತಿಯೇನೆಂದರೆ, ನಾವೀಗ ಕ್ರೈಸ್ತಧರ್ಮವೆಂದು ಹೇಳುವ (ಶ್ರದ್ಧೆಯು) ಪುರಾತನ ಜನರಲ್ಲಿಯೇ ರೂಢಿಯಿತ್ತು. ಅದು ಮಾನವ ಜನಾಂಗದ ಆದಿಯಿಂದಲೂ, ಏಸುಕ್ರಿಸ್ತನು ಭೌತಿಕ ದೇಹದಲ್ಲಿ ಕಾಣಿಸಿಕೊಳ್ಳುವವರೆಗೆ, ಎಂದೂ ಇಲ್ಲದೇ ಇರಲಿಲ್ಲ. ಹೀಗಾಗಿ, ಅದಾಗಲೇ ಅಸ್ತಿತ್ವದಲ್ಲಿದ್ದ ನೈಜ ಧರ್ಮವನ್ನೇ ಈಗ ಕ್ರೈಸ್ತಧರ್ಮವೆಂದು ಕರೆಯಲಾಗುತ್ತಿದೆ."

ಆಧುನಿಕ ಯುಗದಲ್ಲಿ, ಅಂತರ್ಗತ ಮನೋಭಾವವು ಒಂದು ನಿರ್ದಿಷ್ಟ ಅಂತರಧರ್ಮೀಯ ಮನೋಭಾವವಾಗಿ ಪರಿಣಮಿಸಿತು. ಇದಕ್ಕೆ ಜರ್ಮನಿಯ ಕ್ಯಾಥೋಲಿಕ್ ದೈವಶಾಸ್ತ್ರಜ್ಞನಾದ ಕಾರ್ಲ್ ರಹನೆರ್ ಎನ್ನುವವರು ೧೯೬೧ ರಲ್ಲಿ ಒಂದು ರೂಪುರೇಖೆಯನ್ನು ಕೊಟ್ಟರು. ಅವರ ಪ್ರಕಾರ ಎಲ್ಲ ಧರ್ಮಗಳ ಮೂಲಕ ಧರ್ಮಕಾರ್ಯವೆಸಗುತ್ತಿರುವವನು ಏಸುಕ್ರಿಸ್ತನೇ; ಇತರೆಲ್ಲ ಧರ್ಮದವರು ಅವರ ಆಚರಣೆಗಳ ಮೂಲಕ ಆರಾಧಿಸುತ್ತಿರುವುದು ಏಸುಕ್ರಿಸ್ತನನ್ನೇ. ಆದರೆ ಅವರಿಗೆ ಅದರ ಅರಿವಿಲ್ಲ, ಅಷ್ಟೆ. ಹೀಗಾಗಿ ರಹನೆರ್ ಇತರ ಧರ್ಮಗಳ ಅನುಯಾಯಿಗಳನ್ನು ಹೆಸರಿಸುವುದು, 'ಅಜ್ಞಾತ ಕ್ರೈಸ್ತರು' ಎಂದೇ. ಹ್ಯಾನ್ಸ್ ಕುಂಗ್, ಹೆನ್ರಿ ಲೆ ಸೌಕ್ಸ್ (ಅಭಿಷಿಕ್ತಾನಂದ), ಡಾಮ್ ಬೆಡೆ ಗ್ರಿಫಿತ್ಸ್, ಕ್ಲೌಸ್ ಕ್ಲೊಸ್ಟರ್‌ಮೈರ್ ಮತ್ತಿತರ ದೈವಶಾಸ್ತ್ರಜ್ಞರು ಮತ್ತು ಚಿಂತಕರು ಈ ಚಿಂತನಾ ವಿಧಾನವನ್ನು ಬೆಂಬಲಿಸಿದ್ದಾರೆ.[೫]

ಸ್ವಾಮಿ ವಿವೇಕಾನಂದರ ಕೆಲವು ಹೇಳಿಕೆಗಳೂ ಕೂಡ ಅವರು ಮೇಲಿನ ಮನೋಭಾವನೆಯ ಪ್ರತಿಪಾದಕರೇನೋ ಎಂಬ ಭಾವನೆಯನ್ನು ನಮ್ಮಲ್ಲಿ ಮೂಡಿಸುತ್ತದೆ. ಅಂತಹ ಒಂದು ಹೇಳಿಕೆ ಹೀಗಿದೆ: " ನಾನು ಹೊಸದಾಗಿ ಕಂಡುಹಿಡಿದಿರುವುದನ್ನು ನಿನಗೆ ಹೇಳುತ್ತೇನೆ. ವೇದಾಂತದಲ್ಲಿ ಧರ್ಮದ ತಿರುಳೆಲ್ಲ ಅಡಕವಾಗಿವೆ. ಅಂದರೆ, ಅವೆಲ್ಲಾ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಈ ಮೂರು ಸ್ಥಿತಿಗಳಲ್ಲಿರುವುದು. ಇವು ಒಂದರ ಮೇಲೊಂದು ಬರುವುವು. ಮಾನವನ ಆತ್ಮವಿಕಾಸದ ಬೆಳವಣಿಗೆಯ ಮೂರು ಸ್ಥಿತಿಗಳು"[೬]

ಆದರೆ ನಾವು ಈ ಲೇಖನದ ಮುಂದಿನ ಭಾಗದಲ್ಲಿ ಕಾಣುವಂತೆ, ಸ್ವಾಮೀಜಿ ವೇದಾಂತ ಎಂಬ ಪದವನ್ನು ಇನ್ನೂ ವ್ಯಾಪಕ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಆದ್ದರಿಂದ ಅವರು ಅಂತರ್ಗತ ಮನೋಭಾವವನ್ನು ಹೊಂದಿದ್ದರು ಎಂದು ಪರಿಗಣಿಸಲಾಗದು. (ಮುಂದುವರಿಯುವುದು)

ಆಕರಗಳು:

೧. ಸ್ವಾಮಿ ಗಂಭೀರಾನಂದ, *Sri Sarada Devi, the Holy Mother ( Chennai, Sri Ramakrishna Math) p.463*

೨. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೩:೧೮೬

೩. ಈ ಎಲ್ಲ ಮನೋಭಾವಗಳ ವಿವರಣಾತ್ಮಕ ಚರ್ಚೆಗೆ ನೋಡಿ, Alan Race, *Christians and Religious Pluralism* ( London: SCM Press, 1993 )

೪. *ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।*
*ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥*
(ಭಗವದ್ಗೀತೆ, ೪:೧೧)

೫. ಅಂತರ್ಗತ ಮನೋಭಾವದ ಬಗೆಗಿನ ಈ ಚರ್ಚೆಗೆ ಆಧಾರ Alan Race ಅವರ ಹಿಂದೆಯೆ ಉದ್ಧರಿಸಿದ ಗ್ರಂಥ.

೬. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೪:೨೮೬



ಶ್ರೀ ಶಶಧರ ಎನ್ನುವವರು ಸ್ವಾಮಿ ಅದ್ಭುತಾನಂದರನ್ನು "ನಾವು ಆತ್ಮನನ್ನು ತಿಳಿಯಲು ಯಾಕೆ ಅಪೇಕ್ಷೆ ಪಡಬೇಕು?" ಎಂದು ಕೇಳಿದರು. **ಸ್ವಾಮಿ ಅದ್ಭುತಾನಂದರು:** "ಏಕೆಂದರೆ ಆತ್ಮವೇ ನಮ್ಮ ನಿಜಸ್ವರೂಪ". **ಶಶಧರ:** "ಆತ್ಮ ನಮ್ಮ ನಿಜಸ್ವರೂಪವಾದರೆ, ನಮ್ಮ ಅರಿವಿಗೇಕೆ ಅದು ಬರುವುದಿಲ್ಲ?" **ಸ್ವಾಮಿ ಅದ್ಭುತಾನಂದರು:** "ಕೇಳಿಲ್ಲಿ, ತನ್ನ ನಿಜಸ್ವರೂಪದಿಂದ ಯಾರಾದರೂ ವಿಚಲಿತರಾಗುವರೆ? ನೀನು ಕೊಲ್ಕತಾದ ಮಚುವಾ ಬಜಾರ್‌ನಲ್ಲಿ ಮೆರುಗು ಕೊಡುವ ಅಂಗಡಿಗಳಲ್ಲಿ ನೋಡಿಲ್ಲವೆ? ಗಾಜಿನ ಜಾಡಿಗಳಲ್ಲಿ ಬಣ್ಣದ ದ್ರವಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲಸದವನು ಕಪ್ಪಾಗಿಹೋದ ಹಿತ್ತಾಳೆ ಪಾತ್ರೆಯನ್ನು ಒಂದು ಜಾಡಿಯಲ್ಲಿ ಅದ್ದುತ್ತಾನೆ, ತಕ್ಷಣ ಕಲೆಗಳೆಲ್ಲ ಹೋಗಿ ಪಾತ್ರೆ ಲಕಲಕ ಹೊಳೆಯತೊಡಗುತ್ತದೆ. ನಂತರ ಅವನು ಅದನ್ನು ಇನ್ನೊಂದು ಜಾಡಿಯಲ್ಲಿ ಅದ್ದುತ್ತಾನೆ, ಆಗ ಅದಕ್ಕೆ ಬಂಗಾರದ ಬಣ್ಣ ಬರುತ್ತದೆ. ಹಾಗೆಯೇ, ನಿನ್ನ ಮನಸ್ಸನ್ನು ದೇವರ ನಾಮದ ಜಾಡಿಯಲ್ಲಿ ಅದ್ದು. ಆಗ ಕಲೆಕೊಳೆಗಳೆಲ್ಲ ಹೋಗಿ ಅದು ಶುಭ್ರವಾಗುತ್ತದೆ. ನಂತರ ಅದನ್ನು ಭಗವತ್ಕೃಪೆಯ ಜಾಡಿಯಲ್ಲಿ ಅದ್ದು. ನಿನ್ನ ನಿಜಸ್ವರೂಪ ಹೇಗೆ ಪ್ರಕಾಶಿಸುತ್ತದೆ ಎಂಬುದನ್ನು ನೋಡುವೆಯಂತೆ."

**(ಸ್ವಾಮಿ ಅದ್ಭುತಾನಂದ ಜಯಂತಿ, ಫೆಬ್ರವರಿ 21)**